**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.121/2021**

ಪ್ರಾ.ಸಾ. 29

ಚಾ.ಸಾ. 42

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.01.2026**

| | |
|---|---|
| ಸಾಕ್ಷಿದಾರರ ಹೆಸರು | ಗುರುಪ್ರಸಾದ್.ಹೆಚ್.ಕೆ. |
| ತಂದೆಯ ಹೆಸರು | ಕೃಷ್ಣೇಗೌಡ.ಸಿ. |
| ವಯಸ್ಸು | 39 ವರ್ಷ |
| ಉದ್ಯೋಗ | ಹೆಡ್ ಕಾನ್ಸ್‌ಸ್ಟೇಬಲ್ , ಸೈಬರ್‌ಕ್ರೈಂ ಪೊಲೀಸ್ ಠಾಣೆ, ಮಂಡ್ಯ (ಪಿಸಿ 347) |
| ವಾಸ | ಮಂಡ್ಯ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2019 ರಿಂದ 2024 ರವರೆಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 15.05.2021 ರಂದು ನಮ್ಮ ಸಿ ಪಿ ಐ ಭರತ್ ಬಿ.ಆರ್. ಗೌಡ ರವರು ಮದ್ದೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿ ಎಸ್ ಐ ಮೋಹನ್ ಡಿ ಪಾಟೀಲ್ ಚಾಸಾ.52, ಸಿ ಹೆಚ್ ಸಿ 28 ಶಿವಕುಮಾರ್

ಚಾಸಾ.44, ಸಿ ಪಿ ಸಿ 541 ಚಿರಂಜೀವಿ ಚಾಸಾ.43 ಮತ್ತು ನನ್ನನ್ನು ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ನೇಮಿಸಿದರು. ನಾವುಗಳೆಲ್ಲಾ ಗೆಜ್ಜಲಗೆರೆ, ಮದ್ದೂರು ಟೌನ್, ಸೋಮನಹಳ್ಳಿ, ಚನ್ನಪಟ್ಟಣಗಳಿಗೆ ಹೋಗಿ ಬಾಬ್ತಿದಾರರನ್ನು ವಿಚಾರಿಸಿದೆವು. ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ನಮ್ಮನ್ನು ಆರೋಪಿಗಳ ಪತ್ತೆ ಬಗ್ಗೆ ನೇಮಿಸುವಾಗಿ ನಮ್ಮ ಸಿ ಪಿ ಐ ಚಾಸಾ.54 ರವರು ಆರೋಪಿಗಳ ಚಹರೆ ಬಗ್ಗೆ ಮಾಹಿತಿ ನೀಡಿದ್ದರು. ಆ ಚಹರೆಯ ಆಧಾರದ ಮೇಲೆ ನಾವು ಬಾತ್ಮಿದಾರರನ್ನು ಸಂಪರ್ಕಿಸಿ ಆರೋಪಿಗಳ ಬಗ್ಗೆ ಮಾಹಿತಿ ಕಲೆ ಹಾಕಿದೆವು. ದಿನಾಂಕ 16.05.2021 ರಂದು ಸಂಜೆ 6.00 ಗಂಟೆಗೆ ಮುದುಗೆರೆ ಗೇಟ್ ಬಳಿ ಕೆಎ–11–ಇಎಲ್–5557 ಪಲ್ಸರ್ ಬೈಕಿನಲ್ಲಿ ಆರೋಪಿಗಳಾದ ಇಂದುಕುಮಾರ್, ಪ್ರಸಾದ್, ಸ್ವರೂಪ್ ಗೌಡ ಹೋಗುವ ಬಗ್ಗೆ ಮಾಹಿತಿ ತಿಳಿದು ಮುದುಗೆರೆ ಗೇಟ್ ಬಳಿಗೆ ನಾವು ಹೋಗಿ 1, 5, 6 ನೇ ಆರೋಪಿಗಳನ್ನು ವಶಕ್ಕೆ ಪಡೆದೆವು. ಬಳಿಕ ಮೂರೂ ಜನ ಆರೋಪಿಗಳನ್ನು ಮದ್ದೂರು ಪೊಲೀಸ್ ಠಾಣೆಗೆ ಸಂಜೆ 6.45 ಗಂಟೆಗೆ ಕರೆದುಕೊಂಡು ಬಂದು ಚಾಸಾ.54 ರವರ ಮುಂದೆ ಬೈಕ್ ಸಹಿತ ಹಾಜರುಪಡಿಸಿದೆವು. ನಮ್ಮ ಪಿ ಎಸ್ ಐ ಮೋಹನ್ ಡಿ ಪಟೇಲ್ ಚಾಸಾ.52 ರವರು ಸದರಿ ಆರೋಪಿಗಳನ್ನು ಚಾಸಾ.54 ರವರ ಮುಂದೆ ಹಾಜರುಪಡಿಸಿ ವರದಿ ಮಾಡಿದರು. ನಾನು ಆ ದಿನ ವಶಕ್ಕೆ ಪಡೆದ 1, 5 ಮತ್ತು 6 ನೇ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ 1 ಮತ್ತು 6 ನೇ ಆರೋಪಿಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. 5 ನೇ ಆರೋಪಿ ಗೈರು ಹಾಜರಾಗಿದ್ದು, ವಕೀಲರು ವಿನಾಯಿತಿ ಅರ್ಜಿ ಹಾಕಿ ಗುರುತಿಸಲು ತಕರಾರು ಇಲ್ಲ ಎಂದು ನುಡಿದ ಕಾರಣ 5 ನೇ ಆರೋಪಿಯನ್ನು ಸಾಕ್ಷಿ ಗುರುತಿಸಿದ್ದಾರೆಂದು ಪರಿಗಣಿಸಲಾಯಿತು.

.

.3. ದಿನಾಂಕ 16.05.2021 ರಂದು ಚಾಸಾ.54 ರವರು ನನ್ನನ್ನು ಮತ್ತು ಮೇಲೆ ಉಳಿದ ಸಿಬ್ಬಂದಿಯನ್ನು ಚಾಸಾ.52 ರವರ ಜೊತೆ ಉಳಿದ ಆರೋಪಿಗಳ ಪತ್ತೆಗೆ ನೇಮಿಸಿದರು. ಚಾಸಾ.54 ರವರು ಉಳಿದ ಆರೋಪಿಗಳಾದ 2 ನೇ ಆರೋಪಿ ಮಧು, 3 ನೇ ಆರೋಪಿ ಅಭಿಷೇಕ್, 4 ನೇ ಆರೋಪಿನಾಗರಾಜು, 7 ನೇ ಆರೋಪಿ ಮಹದೇವ, 8 ನೇ ಆರೋಪಿ ಅವಿನಾಶನ ಚಹರೆಯನ್ನೂ ಕೂಡ

ನೀಡಿದರು. ಪತ್ತೆ ಬಗ್ಗೆ ನೇಮಕ ಮಾಡಿ ಕಳುಹಿಸಿದ್ದಾರೆ. ಬಳಿಕ ನಾವು ನಿಡಘಟ್ಟ, ಚನ್ನಪಟ್ಟಣ, ಮಳೂರು ಗ್ರಾಮಗಳಲ್ಲಿ ಬಾತ್ಮಿದಾರರನ್ನು ಭೇಟಿ ಮಾಡಿ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ದಿನಾಂಕ 17.05.2021 ರಂದು ಬೆಳಗಿನ ಜಾವ 5.00 ಗಂಟೆ ವೇಳೆಯಲ್ಲಿ ಮೇಲೆ ಹೇಳಿದ ಆರೋಪಿಗಳಲ್ಲಿ 3 ನೇ ಆರೋಪಿಯನ್ನು ಹೊರತುಪಡಿಸಿ, ಉಳಿದ ಆರೋಪಿಗಳು ಮುದುಗೆರೆ ಮಾವಿನ ತೋಪಿನಲ್ಲಿರುವ ಬಗ್ಗೆ ಮಾಹಿತಿ ಸಿಕ್ಕಿತು. ಬಳಿಕ ನಾವು ಚಾಸಾ.52 ರವರ ನೇತೃತ್ವದಲ್ಲಿ ಮುದುಗೆರೆ ಮಾವಿನ ತೋಪಿಗೆ ಹೋಗಿ, ಆರೋಪಿ 2, 4, 7 ಮತ್ತು 8 ರವರನ್ನು ಮತ್ತು ಅವರ ಜೊತೆ ಇದ್ದ ಕೆಎ–11–ವೈ–9184 ಪ್ಯಾಷನ್ ಪ್ರೋ ಬೈಕ್ ಮತ್ತು ಕೆಎ–42–ವಿ –9575 ಡಿಸ್ಕವರಿ ಬೈಕ್ ಸಮೇತ ವಶಕ್ಕೆ ಪಡೆದೆವು. ಬಳಿಕ ಅವರನ್ನು ಬೈಕು ಸಮೇತ ಬೆಳಗ್ಗೆ 6.00 ಗಂಟೆಗೆ ಚಾಸಾ.54 ರವರ ಮುಂದು ಮುದ್ದೂರು ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿದೆವು. ಚಾಸಾ.52 ರವರು ವರದಿ ಮಾಡಿದರು. ನಾವು ವಶಕ್ಕೆ ಪಡೆದ ಆರೋಪಿ 2, 4, 7 ಮತ್ತು 8 ಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮೇಲಿನ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಗಳನು ವಶಕ್ಕೆ ಪಡೆಯುವಾಗ ಅವರ ಜೊತೆ ಇದ್ದ ಬೈಕುಗಳ ಫೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಕೆಎ–11–ಇಎಲ್–5557 ಬೈಕನ್ನು ನಿಪಿ.47 ಮತ್ತು ನಿಪಿ.48 ಫೋಟೋಗಳಲ್ಲಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಕೆಎ–11–ವೈ–9184 ಮತ್ತು ಕೆಎ–42–ವಿ –9575 ಎರಡು ಬೈಕುಗಳನ್ನು ನಿಪಿ.50 ಮತ್ತು ನಿಪಿ.51 ಫೋಟೋಗಳಲ್ಲಿ ನೋಡಿ ಗುರುತಿಸಿರುತ್ತಾರೆ.

.

.4. ನಾನು ಹ್ಯಾಂಡಿಕ್ಯಾಮೇರಾದ ಮೂಲಕ ಫೋಟೋ ತೆಗೆಯುವ ಬಗ್ಗೆ ಇಲಾಖೆಯಿಂದ ತರಬೇತಿ ಪಡೆದಿದ್ದೇನೆ. ನಾನು ಸುಮಾರು 3–4 ಪ್ರಕರಣಗಳಲ್ಲಿ ತನಿಖಾಧಿಕಾರಿಗಳ ನಿರ್ದೇಶನದಂತೆ ಹ್ಯಾಂಡಿಕ್ಯಾಮೇರಾದ ಮೂಲಕ ಫೋಟೋ ತೆಗೆದು ಪ್ರಿಂಟ್ ಹಾಕಿಸಿಕೊಟ್ಟಿದ್ದೇನೆ. ಹ್ಯಾಂಡಿಕ್ಯಾಮೇರಾ ಸರ್ಕಾರದಿಂದ ತನಿಖೆಯ ಸಲುವಾಗಿ ಠಾಣೆಗೆ ನೀಡಿರುತ್ತಾರೆ.

.

.5. ದಿನಾಂಕ 25.07.2021 ರಂದು ಮದ್ದೂರು ಪಿಐ ಚಾಸಾ.55 ರವರು ನನಗೆ ಮತ್ತು ಮದ್ದೂರು ಠಾಣೆಯ ಸಿ ಹೆಚ್ ಸಿ 239 ಮಹೇಶ್ ಚಾಸಾ.50 ರವರಿಗೆ ಈ ಪ್ರಕರಣದಲ್ಲಿ ತಲೆ ಮರೆಸಿಕೊಂಡಿರುವ ಆರೋಪಿ ಮೂರನೇ ಆರೋಪಿ ಅಭಿಷೇಕ್ ನನ್ನು ಪತ್ತೆ ಮಾಡಿಕೊಂಡು ಹಾಜರುಪಡಿಸುವಂತೆ ನೇಮಕ ಮಾಡಿ ಕಳುಹಿಸಿಕೊಟ್ಟಿದ್ದರು. ಮೂರನೇ ಆರೋಪಿಯ ಚಹರೆಯನ್ನು ನಮಗೆ ತಿಳಿಸಿಕೊಟ್ಟಿರುತ್ತಾರೆ. ಅದರಂತೆ ನಾವು ನಿಡಘಟ್ಟ, ವಡ್ಡರದೊಡ್ಡಿ, ಬೆಂಗಳೂರಿನ ಅತ್ತಿಬೆಲೆಗೆ ಹೋಗಿ ಆರೋಪಿಯ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ದಿನಾಂಕ 26.07.2021 ರಂದು ಅತ್ತಿಬೆಲೆಯ ವಿನಾಯಕ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಇರುವ ಬಗ್ಗೆ ಮಾಹಿತಿ ಬಂದು ಬೆಳಗ್ಗೆ 5.00 ಗಂಟೆಗೆ ಅಲ್ಲಿಗೆ ಹೋದೆವು. ಬೆಳಗ್ಗೆ 5.00 ಗಂಟೆಗೆ ಆರೋಪಿಯನ್ನು ವಶಕ್ಕೆ ಪಡೆದು, ಬೆಳಗ್ಗೆ 9.00 ಗಂಟೆಗೆ ಮಾದ್ದುರು ಪೊಲೀಸ್ ಠಾಣೆಯಲ್ಲಿ 3 ನೇ ಆರೋಪಿಯನ್ನು ಚಾಸಾ.55 ರವರ ಮುಂದೆ ಹಾಜರುಪಡಿಸಿದೆವು. ಚಾಸಾ.50 ರವರು ಈ ಬಗ್ಗೆ ವರದಿ ನೀಡಿರುತ್ತಾರೆ. 3 ನೇ ಆರೋಪಿಯನ್ನು ನೋಡಿರುತ್ತೇನೆ ಮತ್ತು ಮತ್ತೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

.

.6. ದಿನಾಂಕ 26.07.2021 ರಂದು ಚಾಸಾ.55 ರವರು ಮದ್ಯಾಹ್ನ 1.30 ಗಂಟೆ ಸಮಯದಲ್ಲಿ 3 ನೇ ಆರೋಪಿ ಕೃತ್ಯ ಸ್ಥಳ ಮತ್ತು ಸಂಚು ರೂಪಿಸಿದ ಸ್ಥಳವನ್ನು ತೋರಿಸಿ ಕೊಡುತ್ತೇನೆ ಎಂದು ಹೇಳಿದ್ದರ ಮೇರೆಗೆ, ಆ ಸ್ಥಳಗಳಲ್ಲಿ ಮಾಡುವ ಪಂಚನಾಮೆ ಸಮಯದಲ್ಲಿ ಹ್ಯಾಂಡಿ ಕ್ಯಾಮೇರಾದಲ್ಲಿ ಫೋಟೋ ತೆಗೆಯಬೇಕೆಂದು ನೇಮಿಸಿದರು. ಬಳಿಕ ಚಾಸಾ.55 ರವರು ಕೆಎ–11–ಜಿ–335 ಜೀಪಿನಲ್ಲಿ ಹೆಚ್ ಸಿ 239 ಚಾಸಾ.50 ರವರ ಬೆಂಗಾವಲಿನಲ್ಲಿ 3 ನೇ ಆರೋಪಿಯ ಜೊತೆ ಗೆಜ್ಜಲಗೆರೆ ಕೆ ಎಂ ಎಫ್ ನೀರು ಹರಿಯುವ ಹಳ್ಳದ ಬಳಿ ಮೈಸೂರು–ಬೆಂಗಳೂರು ರಸ್ತೆಯ ಬದಿಗೆ ಹೋದೆವು. ಅಲ್ಲಿಗೆ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಜೀಪು ನಿಲ್ಲಿಸುವಂತೆ ಹೇಳಿ ಜೀಪಿನಿಂದ ಇಳಿದು ಮುಂದು, ಮುಂದಾಗಿ ನಡೆದುಹೋಗಿ ಸ್ಥಳವನ್ನು ತೋರಿಸಿದನು. ಆ ಸ್ಥಳದ ಫೋಟೋವನ್ನು ನನಗೆ ತೆಗೆಯಲು ಹೇಳಿದರು, ನಾನು ಫೋಟೋ

ತೆಗೆದಿದ್ದೇನೆ. ಆಗ ಸಮಯ ಮದ್ಯಾಹ್ನ 1.45 ಗಂಟೆ ಆಗಿತ್ತು. 3 ನೇ ಆರೋಪಿ ಬಳಿಕ ಸಂಚು ರೂಪಿಸಿದ ಸ್ಥಳವನ್ನು ತೋರಿಸಿಕೊಡುತ್ತೇನೆಂದು ಹೇಳಿ, ಕೆ ಎಂ ಎಫ್ ನ 23 ನೇ ಕಾಲುವೆ ಏರಿ ರಸ್ತೆಗೆ ಕರೆದುಕೊಂಡು ಹೋದ. ಅಲ್ಲಿ ಜೀಪು ನಿಲ್ಲಿಸುವಂತೆ ತಿಳಿಸಿ, ಇದೇ ಸ್ಥಳದಲ್ಲಿ ಸಂಚು ರೂಪಿಸಿದ ಜಾಗ ಎಂದು ಹೇಳಿದ. ಅಲ್ಲಿ ಕೂಡ ನಾನು ಪಿ ಐ ರವರ ನಿರ್ದೇಶನದಂತೆ ಫೋಟೋ ತೆಗೆದಿದ್ದೇನೆ. ಆಗ ಸಮಯ 2.00 ಗಂಟೆ ಆಗಿತ್ತು. ಮೇಲೆ ಹೇಳಿದ ಎರಡೂ ಸ್ಥಳಗಳಲ್ಲಿ ತೆಗೆದ ಫೋಟೋಗಳನ್ನು ಪ್ರಿಂಟ್ ಹಾಕಿಸಿ ಚಾಸಾ.55 ರವರಿಗೆ ಹಾಜರುಪಡಿಸಿರುತ್ತೇನೆ. ಫೋಟೋ ತೆಗೆದು ಪ್ರಿಂಟ್ ಹಾಕಿಸಿದ ಬಗ್ಗೆ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಂತೆ ದೃಢೀಕರಣವನ್ನು ಚಾಸಾ.55 ರವರಿಗೆ ನೀಡಿರುತ್ತೇನೆ. ಫೋಟೋ ತೆಗೆಯುವ ಕಾಲಕ್ಕೆ ಹ್ಯಾಂಡಿಕ್ಯಾಮೇರಾ ಸುಸ್ಥಿತಿಯಲ್ಲಿತ್ತು. ನಾನು ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಒಟ್ಟು ಮೂರು ಫೋಟೋಗಳನ್ನು ನೋಡಿ ನಾನು ತೆಗೆದ ಫೋಟೋಗಳು ಎಂದು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.101, ನಿಪಿ.102 ಮತ್ತು ನಿಪಿ.103 ಎಂದು ಗುರುತಿಸಲಾಯಿತು. ಸಾಕ್ಷಿ ದಿನಾಂಕ 26.07.2021 ರ ಕಲಂ 65 ಬಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.104 ಎಂದು, ಸಾಕ್ಷಿ ಸಹಿಯನ್ನು ನಿಪಿ.104 ಎ ಎಂದು ಗುರುತಿಸಲಾಯಿತು.

.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.